'ಹಾಂ? ಅಂದರೆ?'

'ಹೌದು ಅಮ್ಮ ಸ್ವಾತಿಮುತ್ತು ಕಂಪೆನಿಯಲ್ಲಿ ಕೆಲಸದಲ್ಲಿದ್ದಳಲ್ಲ. ಹೀಗೆ ದಿಢೀರ್ ಅಂತ ಆಸ್ಪತ್ರೆಗೆ ಸೇರಿದ ದಿನವೇ ಅವಳಿಗೆ ಪ್ರಮೋಷನ್ ಸಿಕ್ಕಿ ಸಂಬಳವೂ ಜಾಸ್ತಿಯಾಗಿತ್ತು. ಆದರೆ ಅದನ್ನು ಅವಳು ಅಸ್ಸೆಪ್ಟ್ ಮಾಡಲಿಕ್ಕಾಗಲೇ ಇಲ್ಲ. ಆ ಕಾರಣಕ್ಕೇ ಅವಳ ಸಂಬಳ ಇಎಸ್ಐ ಲಿಮಿಟ್ಟಿನ ಒಳಗೇ ಉಳಿದುಬಿಟ್ಟಿತು. ಒಂದೇ ಒಂದು ದಿನ ಅವಳು ಆಫೀಸಿಗೆ ಹೋಗಿದ್ದರೂ ಅದು ಸಿಗುತ್ತಿರಲಿಲ್ಲ. ಆಸ್ಪತ್ರೆ ಬಿಲ್ಲು ನಮ್ಮಿಂದ ಕಟ್ಟಲು ಸಾಧ್ಯವೇ ಆಗುತ್ತಿರಲಿಲ್ಲ'

'ಉಫ್!'

'ಇಲ್ಲಿ ಎಲ್ಲವೂ ನಿಶ್ಚಿತ ಮಗಳೇ. ನಾವು ಪ್ರಾರ್ಥನೆಯನ್ನಷ್ಟೇ ಮಾಡಬೇಕು. ಆಶ್ರಮದಲ್ಲಿದ್ದ ನಂದಿನಿಯನ್ನು ಕೊಂಡೊಯ್ದ ಮೇಲೆ ರಕ್ತಪಾತವೇ ಆಗುತ್ತದೆ ಎಂಬುದು ವಸಿಷ್ಠರಿಗೆ ಗೊತ್ತೇ ಇತ್ತು. ಹೀಗೇ ನಡೆಯುವುದೆಂದು ನಿಶ್ಚಿತವಾಗಿದ್ದರೆ ತಪ್ಪಿಸಲು ಸಾಧ್ಯವಿಲ್ಲ. ಹಾಂ, ಇನ್ನೊಂದು ವಿಷಯ ನಿನಗೆ ಹೇಳುವುದ ಮರೆತೆ'

'ಏನಪ್ಪಾ?'

'ಆ ಎನ್ಐಸಿಯೂನಲ್ಲಿ ನೀನಿದ್ದ ಹೊತ್ತಿನಲ್ಲೇ ಮೂವರು ಮಕ್ಕಳು ವೆಂಟಿಲೇಟರ್ ಸಪೋರ್ಟ್‌ನಲ್ಲಿದ್ದರು. ನಾಲ್ಕನೆಯವಳು ನೀನು. ಪ್ರತಿ ಮೂರ್‍ನಾಲ್ಕು ದಿನಗಳಿಗೊಮ್ಮೆ ಬಿಳೀ ಬಟ್ಟೆ ಸುತ್ತಿದ ಮಗುವಿನ ಶವ ಕೊಂಡೊಯ್ಯುತ್ತಿದ್ದರು. ಆದರೆ, ನನಗೂ ಅಂತಹುದೇ ಸ್ಥಿತಿ ಬರುತ್ತದೆ ಎಂದು ಯೋಚನೆ ಬಾರದಂತೆ ಮನಸ್ಸನ್ನು ಗಟ್ಟಿ ಮಾಡಿಕೊಂಡಿದ್ದೆ. ನನ್ನ ನಂಬಿಕೆಯನ್ನೇ ಹಿಡಿದು ಜೋತಾಡುತ್ತಿದ್ದೆ. ಅದಕ್ಕೆ ಪ್ರಾರ್ಥನೆಯದ್ದೇ ಬಲ. ನಂಬಿಕೆಯು ಮುರಿದರೆ ಪ್ರಾರ್ಥನೆಗೆಲ್ಲಿ ಅರ್ಥ? ನನ್ನ ವೇವ್‌ಲೆಂಗ್ತ್ ನಿನ್ನವರೆಗೂ ತಲುಪುತ್ತದೆ ಎಂದು ನಂಬಿದ್ದೆ. ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಈಚೆ ಬರುವಾಗ ಡಾಕ್ಟರ್ ಸೀತಾರಾಮ್ ಆಳ್ವ ಒಂದು ಮಾತು ಹೇಳಿದ್ದರು. 'ದೇವರಾಜ್, ಕುಸಿದೇ ಹೋಯಿತು ಎನ್ನುವ ಜೀವಕ್ಕೆ ಬದುಕಿನ ಯಾವ ಕ್ಷಣದಲ್ಲಾದರೂ ಮತ್ತೆ ಚೈತನ್ಯ ಬಂದು ಬಿಡಬಹುದು ಎಂಬುದಕ್ಕೆ ನಿಮ್ಮ ಮಗುವಿಗಿಂತ ದೊಡ್ಡ ಸಾಕ್ಷಿ ಬೇಕಾಗಿಲ್ಲ. ಆದರೆ, ಆ ಕ್ಷಣಕ್ಕಾಗಿ ನಾವು ಕಾಯಲೇಬೇಕು. ನಿಮ್ಮ ಪ್ರಾರ್ಥನೆ, ನಮ್ಮ ಪ್ರಯತ್ನವೆಲ್ಲ ಆ ಕ್ಷಣ ಬಂದಾಗಲೇ ಫಲ ಕೊಡೋದು. ಅವಳದ್ದು ಗಟ್ಟಿ ಜೀವ ಎಂದಿದ್ದರು. ಎಂಥಾ ಮಾತಲ್ವಾ ಅನಿಸಿತ್ತು. ಆವತ್ತೇ ನಿನಗೆ ಜೀವಾ ಎಂದು ಹೆಸರಿಡಲು ನಾನು ನಿರ್ಧಾರ ಮಾಡಿದ್ದೆ. ನಿನ್ನೊಳಗೇ ಜೀವ ಅಡಗಿದೆ. ನಾನು ಅದಕ್ಕಾಗಿ ಕಾತರಿಸಿದೆ, ಪ್ರಾರ್ಥಿಸಿದೆ ಅಷ್ಟೇ... ನೀನು ನನ್ನೊಳಗೆ ಜೀವವೇ ಆಗಿ ಉಳಿದುಬಿಟ್ಟೆ...' ಎನ್ನುವಾಗ ಅಪ್ಪನ ಕಣ್ಣಲ್ಲಿ ನೀರಾಡಿತ್ತು.

ಆಸ್ಪತ್ರೆಯಿಂದ ಮನೆಗೆ ಬಂದ ಕ್ಷಣದಿಂದ ಅಪ್ಪ-ಅಮ್ಮ ಯಾವತ್ತೂ ಜಗಳವಾಡಿಲ್ಲ. ಪ್ರತಿ ಕ್ಷಣವನ್ನೂ ಸಂಭ್ರಮ ಎಂದೇ ಬದುಕಬೇಕು ಅನ್ನುತ್ತಿದ್ದರು. 'ನೀನು ಎಲ್ಲರ ಪಾಲಿನ ಜೀವ. ನಿನಗೆ ಎಲ್ಲರನ್ನೂ ಲೀಡ್ ಮಾಡುವ ಸಾಮರ್ಥ್ಯವಿದೆ' ಅನ್ನುತ್ತಿದ್ದರು ಅಪ್ಪ ಯಾವತ್ತೂ. ಅಪ್ಪನಿಗಿಂತ ದೊಡ್ಡ ಲೀಡರ್ ಬೇಕೆ ಎಂದು ನಾನು ಅಂದುಕೊಳ್ಳುತ್ತಲೇ ಬೆಳೆದೆ.

'ಹೀಗೆ ನಿನ್ನ ಕೈ ಹಿಡಿದು ಕುಳಿತುಬಿಟ್ಟರೆ ಸಾಕು ಅದೇನೋ ಸೆಳೆತ. ಕಣ್ಣಲ್ಲಿ ಹನಿ ಹನಿ ಜಿನುಗುವಷ್ಟು ಖುಷಿ. ಯಾಕೆ ಹೀಗೆ ಜೀವಾ ನೀನು? ನಿನ್ನೊಳಗೆ ಅದೆಂಥ ಚೈತನ್ಯವಿದೆ? ವೇವ್‌ಲೆಂಗ್ತ್ ಎಂಬ ಖುಷಿ ಕಾಣಬೇಕಾದರೆ ನಿನ್ನಲ್ಲಿ ಮಾತ್ರ' ಅನ್ನುತ್ತಿದ್ದರು ಅಪ್ಪ.

ಅದು ನಿಜವಿರಬಹುದೇ ದಯಾ?

ಹಾಗೆ ಪ್ರಶ್ನೆ ಕೇಳಿದ ಜೀವಾ ಕ್ಷಣ ಕಾಲ ಮಾತು ನಿಲ್ಲಿಸಿ ಸುಮ್ಮನಾದಳು. ಅವಳ ಆ ಮಾತನ್ನು ಕೇಳಿಸಿಕೊಂಡವನಂತೆ ದಯಾನಂದ್ ಅವಳ ಕೈಯನ್ನು ಒಂದೊಂದೇ ಕಣ ಬಿಗಿ ಮಾಡುತ್ತಿರುವುದು ಅವಳ ಅನುಭವಕ್ಕೆ ಬಂತು.

ಜೀವಾ ಮೂಗಿನ ಹೊಳ್ಳೆಗಳು ಅರಳಿಕೊಂಡವು. ಕೊರಳುಬ್ಬಿತು. ಹನಿಗಣ್ಣಾಯಿತು. ಅವಳು ಅತ್ತಿದ್ದು ಕಾಣಿಸಲಿಲ್ಲ. ಕೈಯನ್ನು ಅಷ್ಟೇ ಬಿಗಿಯಾಗಿ ಹಿಡಿದು ಭುಜಕ್ಕೆ ಭುಜ ಸೇರಿಸಿ ಅವನ ಎದೆಯ ಮೇಲೆ ತಲೆಯನ್ನಿಟ್ಟಳು. ದಯಾ ಆ ತಲೆಯ ಮೇಲೆ ಗಲ್ಲವನಿಟ್ಟು ಹೂಮುತ್ತನಿತ್ತ. ಅವನು ಹುಶಾರಾಗಿಯೇ ಆಗುತ್ತಾನೆ ಎಂಬ ನಂಬಿಕೆಯ ತಂತು ಭದ್ರವಾದಂತೆ ಅನಿಸಿತು. ಕತ್ತು ಹೊರಳಿಸಿ ಹಿಂದಿನ ಸೀಟಿನತ್ತ ಇಣುಕಿದಳು. ತನು-ಮನ ಇಬ್ಬರೂ ಕೈಕೈ ಹಿಡಿದು ಇನ್ನೂ ನಿದ್ದೆಗೆ ಶರಣಾಗಿದ್ದರು. ಬಸ್ಸು ನೆಲಮಂಗಲವನ್ನು ದಾಟಿ ಬೆಂಗಳೂರಿಗೆ ಪ್ರವೇಶ ಪಡೆದುಕೊಳ್ಳುತ್ತಿತ್ತು.

●